<u>ದಿಃ13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟಿಸವಾಲು ಃ ವಾದಿ ಪರ ಶ್ರೀ. ಬಿ.ಎಸ್.ಎನ್ ವಕೀಲರಿಂದ ಃ</u>

20. ಈ ದಾವೆಯಲ್ಲಿ ನಾನು ಲಿಖಿತ ತಕರಾರು ಹಾಕುವ ಸಂದರ್ಭದಲ್ಲಿ ನನ್ನ ಬ್ಯಾಂಕು ಸ್ಟೇಟ್ ಮೆಂಟುಗಳನ್ನು ನೋಡಿಯೇ ಹಾಕಿದ್ದೇನೆ. ನನ್ನ ಬ್ಯಾಂಕ್ ಸ್ಟೇಟ್ ಮೆಂಟುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು ನಾನು ಆ ರೀತಿಯ ಬ್ಯಾಂಕ್ ಸ್ಟೇಟ್ ಮೆಂಟುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಮತ್ತು ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

21. 4 ಲಕ್ಷ ರೂಪಾಯಿಗಳು ವಿನಯ್ ಶ್ರೀಶೈಲ ಅವರು ನೀಡಿರುವ ಚೆಕ್ಕುಗಳಿಂದ ನನಗೆ ಬಂದಿದೆ ಎಂದರೆ ಸುಳ್ಳು. ವಿನಯ್ ಶ್ರೀಶೈಲ ಅವರು ನೀಡಿರುವ ಚೆಕ್ಕುಗಳಿಂದ ನನ್ನ ಖಾತೆಗೆ 4 ಲಕ್ಷ ರೂಪಾಯಿಗಳು ಜಮಾ ಆಗಿದೆ ಎಂದು ತೋರಿಸಲು ಈ ದಾವೆಯ ವಾದಿ ಬ್ಯಾಂಕ್ ಸ್ಟೇಟ್ ಮೆಂಟುಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸುಳ್ಳು. ವಾದಿ ಯಾವುದೆಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂಬುದನ್ನು ನಾನು ನೋಡಿದ್ದೇನೆ. ನಿ.ಪಿ.12 ನ್ನು ನಾನು ನೋಡಿದ್ದೇನೆ. 2 ಮತ್ತು 3 ನೇ ವಾದಿಗಳು ಹಾಜರುಪಡಿಸಿರುವ ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್ ನಲ್ಲಿಯೂ ಸಹ 2 ನೇ ಪ್ರತಿವಾದಿಗೆ ರೂ.3,50,000/- ಸಂದಾಯವಾಗಿದೆ ಎಂಬುದು ಕಾಣುತ್ತದೆ ಎಂದರೆ

ಸುಳ್ಳು. ಸಾಕ್ಷಿ ಮುಂದುವರಿದು 2ನೇ ಪ್ರತಿವಾದಿಗೆ 3 ಲಕ್ಷ ಮಾತ್ರ ನೀಡಿದ್ದೇವೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯಿಂದ ಈ ಬಗ್ಗೆ ದಾಖಲೆಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

22. 2ನೇ ಪ್ರತಿವಾದಿಯ ಜೊತೆ ನಾನು ವ್ಯವಹಾರ ಮಾಡುವುದು ಮೊದಲಿನಿಂದಲೂ ಇದೆ ಎಂದರೆ ಸಾಕ್ಷಿ ಕೇವಲ ಸಾಮಾಗ್ರಿಗಳನ್ನು ಖರೀದಿಸುವ ವ್ಯವಹಾರ ಮಾತ್ರ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಕಡೆಯಿಂದ ಸಾಮಾಗ್ರಿಗಳನ್ನು ಸಾಲದ ರೂಪದಲ್ಲಿ ಪಡೆಯುತ್ತಿದ್ದು ಆ ಬಳಿಕ ನಾನು ಹಣ ಪಾವತಿ ಮಾಡುತ್ತಿದ್ದೆ ಎಂದರೆ ಸರಿ. ವಾದಿಯ ಕೆಲಸಗಳಿಗೂ ಸಹ ನಾನು 2ನೇ ಪ್ರತಿವಾದಿಯ ಕಡೆಯಿಂದ ಸಾಮಾಗ್ರಿಗಳನ್ನು ಖರೀದಿಸುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು 2ನೇ ಪ್ರತಿವಾದಿಯ ಕಡೆಯಿಂದ ಯಾವುದೇ ಸಾಮಾಗ್ರಿಗಳನ್ನು ಸಾಲದ ರೂಪದಲ್ಲಿ ಖರೀದಿಸಿಲ್ಲ. ನಾನು 2ನೇ ಪ್ರತಿವಾದಿಯ ಕಡೆಯಿಂದ 3 ಲಕ್ಷ ರೂಪಾಯಿಯ ಸಾಮಾಗ್ರಿಗಳನ್ನು ಖರೀದಿಸಿದ್ದು ವಾದಿಯ ಕಡೆಯಿಂದಲೇ ಚೆಕ್ ಕೊಡಿಸಿದ್ದೇನೆ. ನಾನು 2ನೇ ಪ್ರತಿವಾದಿಯ ಕಡೆಯಿಂದಲೇ ಸಾಮಾಗ್ರಿಗಳನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳುತ್ತೇನೆ ಎಂದು ವಾದಿಗೆ ನಂಬಿಸಿ ವಾದಿಯ ಮೂಲಕ ಹಣ ಪಾವತಿ ಮಾಡಿಸಿದ್ದೇನೆ ಎಂದರೆ ಸುಳ್ಳು. ನಾನು ಹಿಂದೆ ತೆಗೆದುಕೊಂಡ ಸಾಮಾಗ್ರಿಗಳಿಗೆ 2ನೇ ಪ್ರತಿವಾದಿಗೆ ಹಣ ಪಾವತಿ ಮಾಡದ ಕಾರಣ ವಾದಿ ನೀಡಿದ ರೂ.3,50,000/-ಗಳನ್ನು ಅವರು ಈ

ವ್ಯವಹಾರಕ್ಕೆ ಹೊಂದಿಸಿಕೊಂಡು ನಮಗೆ ಸಾಮಾಗ್ರಿಗಳನ್ನು ನೀಡಿಲ್ಲ ಎಂದರೆ ಸುಳ್ಳು. 2 ನೇ ಪ್ರತಿವಾದಿ ನಮಗೆ ಸಾಮಾಗ್ರಿಗಳನ್ನು ಸರಿಯಾಗಿ ನೀಡದ ಕಾರಣ ನಾನು ಕೆಲಸ ಸಂಪೂರ್ಣವಾಗಿ ಮಾಡದ ಕಾರಣ ವಾದಿ ಅರ್ಧಕ್ಕೆ ಕೆಲಸ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ವ್ಯವಹಾರ ರೂ.3,32,000/-ಕ್ಕೆ ಮಾತ್ರ ಸಾಮಾಗ್ರಿಗಳನ್ನು ಪಡೆದುಕೊಂಡಿದ್ದರೂ ರೂ.4,00,000/-ದಷ್ಟು ಹಣವನ್ನು ಕೂಲಿ ಸೇರಿ ಮತ್ತು ಅದಕ್ಕೆ ಬಡ್ಡಿ ಸೇರಿಸಿ ರೂ.6,00,000/-ವನ್ನು ಪಾವತಿ ಮಾಡುತ್ತೇನೆ ಎಂದು ವಾದಿಯ ಜೊತೆ ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಕೆಲಸ ನಿಲ್ಲಿಸಿದ ಕಾರಣ ವಾದಿ 2 ಚೆಕ್ಕುಗಳ ಹಣವನ್ನು ಸ್ಟಾಪ್ ಪೇಮೆಂಟ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನಿ.ಪಿ.9 ರಿಂದ 11 ರ ಬಿಲ್ಲುಗಳಲ್ಲಿ ವ್ಯಾಟ್ ಚಾರ್ಜುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. 2017 ರ ಒಳಗೆ ನಿ.ಪಿ.9 ರಿಂದ 11 ರ ಬಿಲ್ಲುಗಳ ವ್ಯಾಟ್ ಚಾರ್ಜುಗಳನ್ನು ಪಾವತಿ ಮಾಡಿದ್ದೇನೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲದ ಕಾರಣ ನಾನು ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.